ಒಡೆದಿದೆ ಕುರ್ಚಿಗಳೆಲ್ಲಾ ಮುರಿದುಹೋಗಿವೆ, ಅದು ವಿಚಿಕ್ರವಾದ ಅಧೋಗತಿಯಲ್ಲಿದೆ. ಆಮೇಲೆ ಮೊನ್ನೆ ಏನು ಹೇಳಿದರೆಂದರೆ, ಯಾರಾದರೂ ಕುಕ್ಕರಹಳ್ಳಿ ಕೆರೆಯನ್ನು ವಹಿಸಿಕೊಳ್ಳುವುದಾದರೆ ಕೊಡುವ ಬಗ್ಗೆ ಪರಿಶೀಲಿಸುವುದೆಂದು ಹೇಳಿದರು. ಅದಕ್ಕೂ ಕೂಡ ಬಂದಿದ್ದಾರೆ. ಅದಕ್ಕೂ ಉತ್ತರ ಕೊಡಲಿ, ಇದಕ್ಕೂ ಉತ್ತರ ಕೊಡಲಿ, ಇದನ್ನು ಯಾರಿಗಾದರೂ ವಹಿಸಿಕೊಡುವುದಕ್ಕೆ ತಯಾರಿದ್ದರೆ ವಹಿಸಿಕೊಡಲಿ, ತೆಗೆದುಕೊಳ್ಳುವುದಕ್ಕೆ ತಯಾರಿದ್ದಾರೆ. ಒಟ್ಟಿನಲ್ಲಿ ಕಲಾಮಂದಿರದ ಕೊಳಕನ್ನು ಸರಿಪಡಿಸಿ ಕಲಾಮಂದಿರ ಕಲಾಮಂದಿರವಾಗಿ ಉಳಿಯಬೇಕು, ಏಕೆಂದರೆ ಕನ್ನಡನಾಡು ವೇದದ್ರಷ್ಟಾರ ನಾಡು, ಕವಿಕೋಗಿಲೆಗಳ ಗೂಡು ಎಂದು ತನ್ನದೇ ಆಗಿರುವ ಅತ್ಯುನ್ನತ್ತಿ ಹೊಂದಿರುವ ಈ ಕನ್ನಡ ನಾಡಿಗೆ ಮೆರುಗು ಕೊಟ್ಟಂಥ ಈ ಕಲಾಮಂದಿರ ಇವತ್ತು ಕೊಳಕು ಮಂದಿರವಾಗಿದೆ. ಇದನ್ನು ಸರಿಪಡಿಸಿ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು) : ಮಾನ್ಯ ಅಧ್ಯಕ್ಷರೆ, ಇಷ್ಟೊಂದು ಸಾಂಸ್ಕೃತಿಕವಾಗಿ ಮಾತನಾಡಿರತಕ್ಕ ಶಂಕರಲಿಂಗೇಗೌಡರು ಕಲಾಮಂದಿರವನ್ನು ಕೊಳಕು ಮಂದಿರ ಎಂದು ಹೇಳಿರತಕ್ಕದ್ದು ಸೂಕ್ತವಲ್ಲ. ಕಲಾಮಂದಿರವನ್ನು ಕೊಳಕು ಮಂದಿರವನ್ನಾಗಿ ಮಾಡಲು ಯಾರೂ ಬಯಸುವುದಿಲ್ಲ. ವಿಶ್ವಕನ್ನಡ ಸಮ್ಮೇಳನದ ಅಂಗವಾಗಿ ಕನ್ನಡ ಸಂಸ್ಕೃತಿ ಇಲಾಖೆಯವರು ಜಿಲ್ಲೆಗೆ ಒಂದು ರಂಗಮಂದಿರವನ್ನು ನಿರ್ಮಾಣ ಮಾಡಬೇಕು ಎಂಬ ಯೋಜನೆಯಲ್ಲಿ 16 ಜಿಲ್ಲೆಗಳಲ್ಲಿ ಅಂದು ಕಲಾಮಂದಿರಗಳ ಮಂಜೂರಾತಿ ನೀಡಲಾಯಿತು. ಎಂಟು ಜಿಲ್ಲೆಗಳಲ್ಲಿ ಕಲಾಮಂದಿರ ನಿರ್ಮಾಣವಾಗಿದೆ. ಅವರು ಹೇಳಿದಂತೆ ಮೈಸೂರಿನ ಕಲಾಮಂದಿರ ಪ್ರತಿಷ್ಠಿತವಾದ ಕಲಾಮಂದಿರ. ಆ ಕಲಾಮಂದಿರದಲ್ಲೇನು ರಿಪೇರಿ ಕೆಲಸಗಳಾಬೇಕಾಗಿದೆ ಅದಕ್ಕೆ ಈಗಾಗಲೇ ಸುಮಾರು ನಾಲ್ಕೂವರೆ ಕೋಟಿ ಬಿಡುಗಡೆ ಮಾಡಿ ಅಲ್ಲಿರುವ ಫ್ಯಾನುಗಳನ್ನು, ಕುರ್ಚಿಗಳನ್ನು ಬದಲಾವಣೆ ಮಾಡುವ ಕೆಲಸ ನಡೆಯುತ್ತಿದೆ. ಮಾನ್ಯ ಶಂಕರಲಿಂಗೇಗೌಡರು ನಾಳೆ ಮೈಸೂರಿಗೆ ಹೋದಾಗ ಅದನ್ನು ನೋಡಿಕೊಂಡು ಬರಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಇದರ ಬಗ್ಗೆ ನಾವು ಉದಾಸೀನ ಮಾಡಿಲ್ಲ. ಅದಕ್ಕೆ ಬೇಕಾದಂಥ ಎಲ್ಲಾ ಸೌಲಭ್ಯಗಳನ್ನು ಒದಗಿಸಲು ಏರ್ಪಾಡು ಮಾಡಿ ಕೊಡುತ್ತೇವೆ. ಕಲಾಮಂದಿರವನ್ನು ಅಭಿವೃದ್ಧಿ ಪಡಿಸುತ್ತೇವೆ ಹಾಗೆಯೇ ಕುಕ್ಕರಹಳ್ಳಿ ಕೆರೆಯ ಅಭಿವೃದ್ಧಿ ಸಲುವಾಗಿ ಖಾಸಗಿಯವರೇನಾದರೂ ಮುಂದೆ ಬಂದರೆ ಅವರಿಗೆ ಎಲ್ಲಾ ರೀತಿಯಾದ ಸಹಾಯ ನೀಡಲು ನಾವು ಸಿದ್ದರಿದ್ದೇವೆ.

ಅಧ್ಯಕ್ಷರು : ಬಳ್ಳಾರಿಯ ಜೋಳದರಾಶಿ ದೊಡ್ಡನಗೌಡರ ಕಲಾಮಂದಿರದ ಸೀಟುಗಳು ಸರಿಯಾಗಿಲ್ಲ. ತಾವು ಅಲ್ಲಿಗೆ ಹೋದಾಗ ನೋಡಿಕೊಂಡು ಬನ್ನಿ.

ಶ್ರೀಮತಿ ಲೀಲಾದೇವಿ. ಆರ್. ಪ್ರಸಾದ್: ನೋಡಿಬರುತ್ತೇನೆ.

**ಅರಕಲಗೂಡು ತಾಲ್ಲೂಕಿನಲ್ಲಿ ದಶಲಕ್ಷ ಬಾವಿ ಯೋಜನೆಯಡಿಯಲ್ಲಿ ಹಣದ ದುರುಪಯೋಗ.**

ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು) : ಮಾನ್ಯ ಅಧ್ಯಕ್ಷರೆ, ಅತ್ಯಂತ ನೋವಿನಿಂದ ಒಂದು ವಿಚಾರವನ್ನು ಹೇಳಬಯಸುತ್ತೇನೆ. ಈ ಹಿಂದೆ ಇದೇ ಸದನದಲ್ಲಿ ಅರಕಲಗೂಡು ತಾಲ್ಲೂಕಿನ ದಶಲಕ್ಷಬಾವಿಯೋಜನೆಯಡಿಯಲ್ಲಿ ಕೃಷಿ ಇಲಾಖೆ ಮತ್ತು ತಾಲ್ಲೂಕು ಪಂಚಾಯಿತಿಯವರು ಇಬ್ಬರೂ

ಅದೇ ಬಾವಿಗಳಿಗೆ ಪೇಮೆಂಟ್ ಮಾಡಿ ಹಣದ ದುರುಪಯೋಗವಾಗಿದೆಯೆಂದು ಪ್ರಸ್ತಾಪ ಮಾಡಿದ್ದೆ. ಆ ರೀತಿ ಪ್ರಸ್ತಾಪ ಮಾಡಿದ ಮೂರು ದಿವಸಗಳ ನಂತರ ಅಂದರೆ 12-9-97 ರಂದು ಮಾನ್ಯ ಕೃಷಿ ಸಚಿವರು ಈ ಸದನದಲ್ಲಿ ಒಂದು ಹೇಳಿಕೆಯನ್ನು ನೀಡಿದರು. ಎರಡೂ ಇಲಾಖೆಗಳಿಂದ ಪೇಮೆಂಟ್ ಆಗಿದೆ, ಕೃಷಿ ಇಲಾಖೆಯಿಂದ ಅವ್ಯವಹಾರ ನಡೆದಿಲ್ಲ, ಅವ್ಯವಹಾರ ನಡೆದಿರತಕ್ಕದ್ದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತಿ ಇಲಾಖೆಯಲ್ಲಿ. ಹಣದ ದುರುಪಯೋಗ ಮಾಡಿದವರ ಮೇಲೆ ಕಠಿಣವಾದ ಕ್ರಮತೆಗೆದುಕೊಳ್ಳಬೇಕು, ಇದರ ಬಗ್ಗೆ ಸಂಬಂಧಪಟ್ಟ ಸಚಿವರಿಗೆ, ಕಾರ್ಯದರ್ಶಿಯವರಿಗೆ ಸೂಚನೆ ಮಾಡುತ್ತೇನೆಂದು ಹೇಳಿದ್ದರು. ಆ ಸಂದರ್ಭದಲ್ಲಿ ಮುಖ್ಯಮಂತ್ರಿಯವರೂ ಸದನದಲ್ಲಿದ್ದರು. ಇದರಲ್ಲಿ ತಪ್ಪಾಗಿದೆ, ತಪ್ಪು ಮಾಡಿದವರಿಗೆ ಎಂಥ ಶಿಕ್ಷೆ ಕೊಡಬೇಕು, ಕ್ರಿಮಿನಲ್ ಕೇಸ್ ಹಾಕಬೇಕೋ, ಕೆಲಸದಿಂದ ವಜಾ ಮಾಡಬೇಕೋ ಎಂಬ ಬಗ್ಗೆ ಸದನದಲ್ಲೇ ಹೇಳಲು ಆಗುವುದಿಲ್ಲ. ಅದರ ಬಗ್ಗೆ ವಿಚಾರ ಮಾಡಿ ಅನಂತರ ತಿಳಿಸುವುದಾಗಿ ಮುಖ್ಯಮಂತ್ರಿಯವರು ಹೇಳಿದ್ದರು. ಅನಂತರ ಮತ್ತೆ ಕೃಷಿ ಸಚಿವರು ಎದ್ದು ನಿಂತು, ಹಣ ದುರುಪಯೋಗವಾಗಿರುವುದು ತಪ್ಪು ಎಂದು ಮುಖ್ಯಮಂತ್ರಿಯವರೂ ಹೇಳಿದ್ದಾರೆ. ಆದ್ದರಿಂದ ಇದರ ಬಗ್ಗೆ ಸಚಿವರ ಮತ್ತು ಕಾರ್ಯದರ್ಶಿಯವರ ಗಮನಕ್ಕೆ ತಂದು ಕ್ರಮತೆಗೆದು ಕೊಳ್ಳುತ್ತೇನೆ ಎಂದು ಹೇಳಿದ್ದರು. ನಾನು ಈ ವಿಚಾರವನ್ನು ಸದನದಲ್ಲಿ ಪ್ರಸ್ತಾಪ ಮಾಡಿ ಸುಮಾರು ಎಂಟು ತಿಂಗಳುಗಳಾಗಿದೆ. ತಪ್ಪಿತಸ್ತರ ಮೇರೆ ಕ್ರಮ ತೆಗದುಕೊಂಡಿರುವ ಬಗ್ಗೆ ಇದುವರೆಗೂ ನನ್ನ ಗಮನಕ್ಕೆ ಬಂದಿಲ್ಲ. ಹಾಗಿದ್ದರೆ ಯಾವ ಪುರುಷಾರ್ಥಕ್ಕಾಗಿ ನಾವು ಈ ಸದನದಲ್ಲಿ ವಿಚಾರವನ್ನು ಪ್ರಸ್ತಾಪ ಮಾಡಬೇಕು. ತಪ್ಪು ಮಾಡಿದವರಿಗೆ ಕೊನೆಯ ಪಕ್ಷ ಸರ್ಕಾರ ಇದೆಯಂಬ ಎಚ್ಚರಿಕೆ ಹೋಗದಿದ್ದರೆ ಹೇಗೆ? ಅದು ತಪ್ಪಾಗಿದೆಯೆಂದು ತಾವೇ ಹೇಳಿದ್ದೀರಿ. ಹಣ ದುರುಪಯೋಗವಾಗಿದೆಯೆಂದು ಹೇಳಿದ್ದೀರಿ. ಆದರೂ ಕ್ರಮ ತೆಗೆದುಕೊಂಡಿಲ್ಲ. ಸರ್ಕಾರ ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದೆ ಎಂಬ ಬಗ್ಗೆ ತಮ್ಮಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಇಲಾಖೆ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುವ ವಿಚಾರದ ಬಗ್ಗೆ ಗ್ರಾಮೀಣಾಭಿವೃದ್ಧಿ ಸಚಿವರಿಂದ ಮತ್ತು ಕೃಷಿ ಸಚಿವರಿಂದ ಉತ್ತರವನ್ನು ತರಿಸಿ ನಾಳೆ ಒದಗಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸದನ ಮುಗಿಯಲು ಮುರ್ನಾಕು ದಿವಸಗಳಿವೆ. ಹಾಗಿದ್ದರೂ ಎಲ್ಲಾ ಸಚಿವರುಗಳು ಸದನಕ್ಕೆ ಬರಲು ತೊಂದರೆಯೇನು?

ಶ್ರೀ ವಾಟಾಳ್ ನಾಗರಾಜ್ : ಸದನವಿರುವಾಗ ದೆಹಲಿಗೆ ಹೋಗುವುದು, ಲಂಡನ್‌ಗೆ ಹೋಗುವುದು ಸರಿಯಲ್ಲ. ಮಂತ್ರಿಗಳು ಇಲ್ಲಿ ಇರಬೇಕಾಗುತ್ತದೆ. ಇದಕ್ಕಿಂತ ಜರೂರಾದ ಕೆಲಸ ಮತ್ತೇನಿರುತ್ತದೆ? ಅಧ್ಯಕ್ಷರು ಅನೇಕಸಾರಿ ಅದರ ಬಗ್ಗೆ ಹೇಳಿದ್ದಾರೆ.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಉದಾಸಿಯವರೇನು ಉತ್ತರ ಕೊಟ್ಟಿದ್ದಾರೆ ಅದಕ್ಕೆ ಸೇರಿಸಿ ಹೇಳುವುದೇನೆಂದರೆ, ಇನ್ನು ಹದಿನೈದು ದಿನದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ

ಶ್ರೀ ಎ.ಟಿ. ರಾಮಸ್ವಾಮಿ : ಸದನದಲ್ಲಿ ಮಂತ್ರಿಗಳು ಉತ್ತರ ಕೊಟ್ಟು ಆರು ತಿಂಗಳುಗಳಾಗಿದೆ. ಇಲ್ಲಿ ತಪ್ಪಾಗಿದೆಯೆಂದು ಸರ್ಕಾರವೇ ಒಪ್ಪಿಕೊಂಡಿದೆ. ಸರ್ಕಾರ ಬೇಕಾದರೆ ಇದಕ್ಕೆ ಪ್ರೋತ್ಸಾಹ ಕೊಡಲಿ, ಆದರೆ ನಾನು ಇದನ್ನು ಪ್ರತಿಭಟನೆ ಮಾಡುತ್ತೇನೆ.

ಅಧ್ಯಕ್ಷರು : ಮಾನ್ಯ ಸಚಿವರು ಭರವಸೆ ಕೊಟ್ಟಿದ್ದಾರೆ. It will go on record. It is a positive assurance stating that they will take action.

ಶ್ರೀ ಎ.ಟಿ. ರಾಮಸ್ವಾಮಿ : ತಾವು ದಯಮಾಡಿ ತಪ್ಪು ತಿಳಿದುಕೊಳ್ಳಬಾರದು. ಆರು ತಿಂಗಳ ಹಿಂದೆಯೇ ಇದರಲ್ಲಿ ತಪ್ಪಾಗಿದೆ ಕ್ರಮ ತೆಗೆದುಕೊಳ್ಳುತ್ತೇವೆಂದು ಸಚಿವರೇ ಹೇಳಿದ್ದರು.

ಅಧ್ಯಕ್ಷರು : ತಾವು ಬಹಳ ತಿಳುವಳಿಕೆಯುಳ್ಳ ಸದಸ್ಯರು. ದಯಮಾಡಿ ತಾವು ಕೇಳಬೇಕು, ಹದಿನೈದು ದಿವಸಗಳಲ್ಲಿ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಾಗಿ ಪಾಸಿಟೀವ್ ಅಶ್ಯೂರೆನ್ಸನ್ನು ಮಾನ್ಯ ಸಚಿವರು ಕೊಟ್ಟಿದ್ದಾರೆ. ಅದು ಕಡತಕ್ಕೆ ಹೋಗಿದೆ. ಒಂದು ವೇಳೆ ಅವರು ಕ್ರಮತೆಗೆದುಕೊಳ್ಳದಿದ್ದರೆ You have lot of strength according to our Rules to initiate action. Please go through the Rules. I will come to your rescue.

## ಟಿ.ಸಿ.ಹೆಚ್.ಗೆ ಅರ್ಜಿಯನ್ನು ಹಾಕುವ ದಿನಾಂಕವನ್ನು ಮುಂದೂಡುವ ಬಗ್ಗೆ

ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಅಧ್ಯಕ್ಷರೆ, ಪ್ರತಿವರ್ಷ ದ್ವಿತೀಯ ಪಿ.ಯು.ಸಿ. ಪರೀಕ್ಷೆಯ ಫಲಿತಾಂಶ ಬಂದನಂತರ ಟಿ.ಸಿ.ಹೆಚ್.ಗೆ ಅರ್ಜಿಯನ್ನು ಕರೆಯಲಾಗುತ್ತಿತ್ತು. ಆದರೆ ಈ ವರ್ಷ ದ್ವಿತೀಯ ಪಿಯುಸಿ ಪರೀಕ್ಷೆಯ ಮೌಲ್ಯ ಮಾಪನವನ್ನು ಉಪನ್ಯಾಸಕರು ಬಹಿಷ್ಕಾರ ಮಾಡಿರುವುದರಿಂದ ಫಲಿತಾಂಶ ವಿಳಂಬವಾಗುತ್ತಿದೆ. ಆದರೆ ಈಗಾಗಲೇ ಟಿಸಿಹೆಚ್ ತರಬೇತಿಗಾಗಿ ಅರ್ಜಿಯನ್ನು ಕರೆಯಲಾಗಿದೆ. ಆದ್ದರಿಂದ ದ್ವಿತೀಯ ಪಿ.ಯು.ಸಿ. ಪರೀಕ್ಷೆಯ ಫಲಿತಾಂಶ ಬರುವವರೆಗೆ ಟಿ.ಸಿ.ಹೆಚ್ ತರಬೇತಿಗಾಗಿ ಅರ್ಜಿಯನ್ನೇನು ಕರೆದಿದ್ದಾರೆ ಅದರ ದಿನಾಂಕವನ್ನು ಮುಂದೂಡಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, ಟಿ.ಸಿ.ಹೆಚ್ ತರಬೇತಿಗೆ ಅರ್ಜಿಯನ್ನು ಸ್ವೀಕರಿಸಲು ಕೊನೆಯ ದಿನಾಂಕ 15-5-1998. ಪಿ.ಯು.ಸಿ. ಮೌಲ್ಯ ಮಾಪನಕ್ಕೂ ಟಿ.ಸಿ.ಹೆಚ್‌ಗೆ ಅರ್ಜಿಯನ್ನು ಸಲ್ಲಿಸುವುದಕ್ಕೂ ಸಂಬಂಧವೇನಿಲ್ಲ. ಪಿ.ಯು.ಸಿ. ಪತ್ರಿಕೆಗಳ ಮೌಲ್ಯಮಾಪನ ಮಾಡಿಸಲು ಎಲ್ಲಾ ವ್ಯವಸ್ಥೆ ಮಾಡಲಾಗಿದೆ. ಪಿಯುಸಿ ಫಲಿತಾಂಶ ಬಂದನಂತರ ಅಲ್ಲಿಂದ ಅಂಕಿಯನ್ನು ಪಡೆದು ಟಿಸಿಹೆಚ್ ಗೆ ಅರ್ಜ ಸಲ್ಲಿಸಿದವರನ್ನು ಆಯ್ಕೆ ಮಾಡಿ ಪ್ರಕಟಣೆ ಮಾಡಲಾಗುವುದು. ಆದ್ದರಿಂದ ಟಿಸಿಹೆಚ್ ಗೆ ಅರ್ಜಿ ಸಲ್ಲಿಸುವ ದಿನಾಂಕವನ್ನು ಮುಂದೂಡುವ ಅವಶ್ಯಕತೆ ಇರುವುದಿಲ್ಲ. ಟಿ.ಸಿ.ಹೆಚ್ ಅರ್ಜಿಯ ಜೊತೆ ಪಿಯುಸಿ ಫಲಿತಾಂಶದ ಬಗ್ಗೆ ಮಾಹಿತಿಯನ್ನೇನೂ ಲಗತ್ತಿಸಬೇಕಾಗಿಲ್ಲ.